# ನಾಸ್ತಿಕತೆ ಮತ್ತು ನೈತಿಕತೆ

ದೇವರು, ಆತ್ಮ ಮತ್ತು ಅಮರತ್ವಗಳನ್ನು ನಂಬುವುದು ಆಸ್ತಿಕತೆ. ಇವು ಕಾಲ ಮತ್ತು ದೇಶಗಳ ಪರಿಮಿತಿಯೊಳಗೆ ಪ್ರಮಾಣಾತೀತವಾಗಿರುವುದರಿಂದ ನಾಸ್ತಿಕತೆಯೂ ಜತೆಜತೆಗೇ ಬೆಳೆದು ಬಂತು. ಹಾಗಾದರೆ ಮಾನವ ಸಮಾಜವನ್ನು ಒಂದು ಸುಸಂಬದ್ಧ ಸೂತ್ರದಲ್ಲಿ ನಡೆಸುತ್ತಿರುವುದು ಯಾವುದು? ಆಸ್ತಿಕತೆಯೊ ಅಥವಾ ನೈತಿಕತೆಯೊ? ಇಲ್ಲಿ ನಾಸ್ತಿಕತೆಯನ್ನು ನೈತಿಕತೆಯೊಂದಿಗೆ ಸಮೀಕರಿಸುತ್ತಿಲ್ಲ. ಆದರೆ ಆಸ್ತಿಕನು ದೇವರ ಬೆಂಬಲ ಕೋರುವಂತೆ ನಾಸ್ತಿಕನಾದವನು ನೈತಿಕತೆಯನ್ನು ಅವಲಂಬಿಸಬೇಕಾಗುತ್ತದೆ ಎಂಬುವುದನ್ನು ಈ ಪ್ರಶ್ನೆ ಧ್ವನಿಸುತ್ತಿದೆ.

ಮನುಷ್ಯ ಸಂಬಂಧಗಳು ಹೀಗೆಯೆ ಇರಬೇಕೆಂದು ದೇವರು ಹೇಳಿಲ್ಲ. ಅದನ್ನು ಮನುಷ್ಯ ಅನುಭವದ ಮೂಲಕ ತಾನೇ ಕಂಡುಕೊಂಡ. ಕಾಲಾಂತರದಲ್ಲಿ ಒಂದು ಜೀವನ ವಿಧಾನ ವಿಕಾಸವಾಯಿತು. ಬಹಳಷ್ಟು ಆಸ್ತಿಕರು ನಂಬಿರುವಂತೆ ಮನುಷ್ಯ ಒಳ್ಳೆಯವನಾಗಿರುವುದು ದೇವರ ಕೃಪೆಯಿಂದ ಅಥವಾ ದೇವರ ಭಯದಿಂದ ಎಂತಲೂ ಹೇಳಬಹುದು. ಕೆಟ್ಟವರಾದರೆ ನರಕಕ್ಕೆ ದೂಡಬಹುದು ಅಥವಾ ಮುಂದಿನ ಜನ್ಮದಲ್ಲಿ ತುಚ್ಛಪ್ರಾಣಿಯಾಗಿ ಹುಟ್ಟಬೇಕಾಗಬಹುದು ಎಂಬ ಕಾರಣದಿಂದ. ಇದೇ ಪ್ರಬಲವಾದ ಕಾರಣವಾಗಿದ್ದರೆ ಪ್ರಪಂಚದಲ್ಲಿ ಕೆಡುಕಿನ ಅಂಶವೇ ಇರುತ್ತಿರಲಿಲ್ಲ. ಆದರೆ ಕೆಡುಕೇ ಹೆಚ್ಚಾಗಿ ಕಾಣಿಸುತ್ತಿದೆಯಲ್ಲ ಯಾಕೆ? ಅಂದರೆ ನೈತಿಕತೆಗೆ ದೇವರು ಸಂಪೂರ್ಣ ಕಾರಣನಲ್ಲ ಎಂದಾಯಿತು.

ನಾಸ್ತಿಕನಾದವನು ಯಾವ ದೇವರ, ಆತ್ಮದ ಹಂಗೂ ಇಲ್ಲದೆ ಬೆಳೆಯುತ್ತಾನೆ. ಮುಂದಿನ ಜನ್ಮದಲ್ಲಿ ತನ್ನ ಅವತಾರವೇನೆಂದು ಚಿಂತಿಸುವುದಿಲ್ಲ. ಆದರೂ ಯಾಕೆ ಸಮಾಜದ ಕಟ್ಟುಪಾಡುಗಳಿಗೆ ಬದ್ಧನಾಗಿರುತ್ತಾನೆ? ಯಾಕೆಂದರೆ ಮನುಷ್ಯ ತನ್ನ ಮತ್ತು ಪರಸ್ಪರರ ಒಳಿತಿಗೆ ಮಾಡಿಕೊಂಡ ಒಡಂಬಡಿಕೆಯ ಪರಿಣಾಮವೇ ಈ ಸಾಮಾಜಿಕ ಸಂರಚನೆ. ಆದ್ದರಿಂದ ತನ್ನ ಮೇಲೆ ತಾನೇ ನಿಯಂತ್ರಣವನ್ನು ಹೇರಿಕೊಳ್ಳುತ್ತಾನೆ. ಒಬ್ಬನು ನಂಬಿಕೆಯ ಆಧಾರದ ಮೇಲೆ ನೈತಿಕತೆಯನ್ನು ಅಳವಡಿಸಿಕೊಂಡರೆ ಇನ್ನೊಬ್ಬನು ಸಾರ್ವತ್ರಿಕ ಒಳಿತನ್ನು ಮನಗಂಡು ನೈತಿಕವಾಗಿರುತ್ತಾನೆ. ಈ ಇಬ್ಬರೂ ಭಂಡಧೈರ್ಯದಿಂದ ಆಗಾಗ ಲಕ್ಷ್ಮಣರೇಖೆಯನ್ನು ದಾಟಬಹುದು!

ಇತ್ತೀಚೆಗಷ್ಟೆ ನೇಪಾಳದಲ್ಲಿ ಸಂಭವಿಸಿದ ಭೀಕರ ಭೂಕಂಪದಿಂದ ಸಾವಿರಾರು ಸಾವು ನೋವುಗಳು ಉಂಟಾದವು. ತೀರ್ಥಯಾತ್ರೆ ಕೈಗೊಂಡಿದ್ದ ಕೆಲವರು ಬದುಕುಳಿದು ಊರು ಸೇರಿದ ಮೇಲೆ ಆ ದೇವರೇ ನಮ್ಮನ್ನು ಕಾಪಾಡಿದ ಎಂದು ಪತ್ರಿಕೆಗಳಲ್ಲಿ ಅಳಲು ತೋಡಿಕೊಂಡರು. ಸಹಸ್ರಾರು ಸಂಖ್ಯೆಯಲ್ಲಿ ಸತ್ತುಹೋದ ಅಲ್ಲಿದ್ದವರನ್ನು ಯಾಕೆ ದೇವರು ಕಾಪಾಡಲಿಲ್ಲ ಎಂಬ ಪ್ರಶ್ನೆ ಇವರನ್ನು ಕಾಡಲೇ ಇಲ್ಲ. ದೇವಸ್ಥಾನದ ಗೋಡೆಗಳು ಚೂರೂ ಕೊಂಕಲಿಲ್ಲ, ಒಳಗಿನ ಮೂರ್ತಿ ಭಗ್ನವಾಗಲಿಲ್ಲ ಎಂಬುದರ ಬಗ್ಗೆ ಪುಂಖಾನುಪುಂಖ ಚರ್ಚೆಗಳು ದೃಶ್ಯಮಾಧ್ಯಮಗಳಲ್ಲಿ ಪ್ರಸಾರವಾದವು. ಅದರ ಹೆಗ್ಗಳಿಕೆ ವಾಸ್ತುಶಿಲ್ಪಿಗೆ ಸಲ್ಲಬೇಕೇ ಹೊರತು ದೇವರಿಗಲ್ಲ ಎಂದು ಯಾರೂ ಹೇಳಲಿಲ್ಲ. 'ದೇವರಿದ್ದರೆ ಲೋಕಹಿತಕ್ಕಾಗಿ ಇರಬೇಕು; ಅದರಲ್ಲಿ ಆಸಕ್ತಿ ಇಲ್ಲದ ದೇವರನ್ನು ಕಟ್ಟಿಕೊಂಡು ನಮಗೆ ಆಗಬೇಕಾದ್ದೇನು?' ಎಂಬ ಎ. ಎನ್. ಮೂರ್ತಿರಾಯರ ಪ್ರಶ್ನೆ ಉತ್ತರವಿಲ್ಲದೆ ಹಾಗೆ ಉಳಿದುಕೊಳ್ಳುತ್ತದೆ. ಅಲ್ಲಿದ್ದ ಕೆಲವರು, ಸಂತ್ರಸ್ತರಿಗೆ ಸರಬರಾಜು ಮಾಡುತ್ತಿದ್ದ ಆಹಾರ ಪೊಟ್ಟಣಗಳನ್ನು, ನೀರಿನ ಬಾಟಲಿಗಳನ್ನು ಕದ್ದು ರೂ.500–1000 ಮಾರಿಕೊಳ್ಳುತ್ತಿದ್ದರು. ಇವರು ಆಸ್ತಿಕರೊ, ನಾಸ್ತಿಕರೊ ತಿಳಿಯದು. ಇದು ನೈತಿಕತೆಯ ಪ್ರಶ್ನೆ.

ಹುಳುಹುಪ್ಪಟೆಗಳು, ಜಲಚರಗಳು, ಸರೀಸೃಪಗಳು ಸಂತಾನೋತ್ಪತ್ತಿಯ ವಿಚಾರದಲ್ಲಿ 'ಮಿಲನ– ಮರೆವು' (fire– forget) ಹವ್ಯಾಸವುಳ್ಳವು. ಮೊಟ್ಟೆಗಳನ್ನು ಇಡುವುದಷ್ಟೆ ಅವುಗಳ ಕೆಲಸ. ಪ್ರೀತಿ, ಪೋಷಣೆಯ ಪರಿಕಲ್ಪನೆ ಅವುಗಳಲ್ಲಿಲ್ಲ. ಕೆಲವು ಪಕ್ಷಿಗಳು, ಸಸ್ತನಿಗಳು ಹೆಚ್ಚು ಸಂತಾನ ಪಡೆಯದೆ ಅವು ಉಳಿಯುವಂತೆ ಕೆಲಕಾಲವಾದರೂ ಆರೈಕೆ ನೀಡುತ್ತವೆ. ಆದರೆ ಸಾಮಾಜಿಕ ಪ್ರಾಣಿಗಳಾದ ಮನುಷ್ಯರು ಹಾಗಲ್ಲ. ತಮ್ಮ ಸಂತಾನದ ಪಾಲನೆ, ಪೋಷಣೆಯ ಹಂತವನ್ನು ಮೀರಿ ಬದುಕಿನುದ್ದಕ್ಕೂ ಕುಟುಂಬದ ಭಾಗವಾಗಿದ್ದು ಅದನ್ನು ಮುಂದುವರೆಸುತ್ತಾರೆ. ಹಾಗಾಗಿಯೆ ಸತ್ತಮೇಲೆ ಕಥೆ ಮುಗಿಯಿತೆಂದು ತಿಳಿಯುವ ನಾಸ್ತಿಕನು ಸಹ ತನ್ನ ಮತ್ತು ತನ್ನವರ ದುಃಖ, ನೋವುಗಳನ್ನು ಅನುಭವಿಸುತ್ತಾನೆ. ಇತರರಲ್ಲಿ ದುಃಖವನ್ನು ಕಂಡಾಗ ತಾನೂ ದುಃಖ ಪಡುತ್ತಾನೆ. ನೈತಿಕತೆ ಒಡಮೂಡುವುದು ಹೀಗೆ. ಒಳ್ಳೆಯ ಮನುಷ್ಯನಾಗುವುದೆಂದರೆ ಸಮಾಜವು ಸರ್ವರ ಒಳಿತಿಗಾಗಿ ನಿರ್ಮಿಸಿರುವ ಮುರಿಯಲಾರದ ನಿಯಮಗಳಿಗೆ ಬದ್ಧವಾಗಿರುವುದು.

ಪ್ರಸಿದ್ಧ ತತ್ವಜ್ಞಾನಿ ಇಮ್ಯಾನುಯಲ್ ಕಾಂಟ್‌ನ ಪ್ರಕಾರ ಅಧ್ಯಾತ್ಮವು ಸಂಪೂರ್ಣವಾಗಿ ಊಹಾಪೋಹದ ಮೇಲೆ ನಿಂತಿರುವ ಒಂದು ಒಂಟಿ ಜ್ಞಾನಶಾಖೆ. ಅದರ ವೈಚಾರಿಕತೆಯು ಅನುಭವವೇದ್ಯವಾದುದನ್ನೆಲ್ಲ ಮೀರಿ ನಿಂತಿರುವಂಥದು. ವಿಚಾರವಿಲ್ಲದ ಅನುಭವ ಕುರುಡು, ಅನುಭವವಿಲ್ಲದ ವಿಚಾರ ಬರಿ ಟೊಳ್ಳು ಎನ್ನುತ್ತಾನೆ ಅವನು. ಧರ್ಮ ಎನ್ನುವುದನ್ನು ಪ್ರಕೃತಿ ಎಂಬರ್ಥದಲ್ಲಿ ತಿಳಿದುಕೊಂಡರೆ ನಾವು ಅದನ್ನು ಅನುಸರಿಸುವುದರಲ್ಲಿ ತಪ್ಪು ಹುಡುಕಲಾಗುವುದಿಲ್ಲ. ಪ್ರಕೃತಿಗನುಸಾರವಾಗಿಯೆ ಮನುಷ್ಯ ಸಂಬಂಧಗಳು ಏರ್ಪಟ್ಟಿವೆ. ಆದ್ದರಿಂದ ನೈತಿಕವಾಗಿರುವುದೆಂದರೆ ಧಾರ್ಮಿಕವಾಗಿರುವುದೆಂದೇ ಅರ್ಥ.

■ ಮೂಚಿ

## ಮಾತೇ ಮುತ್ತು

★ ಸುಶಿಕ್ಷಿತ ಮನಸ್ಸು ಯಾವುದೇ ಆಲೋಚನೆಯನ್ನು ಸ್ವೀಕರಿಸದೇ ಇದ್ದರೂ ಅದನ್ನು ತನ್ನೊಳಕ್ಕೆ ಬಿಟ್ಟುಕೊಳ್ಳುತ್ತದೆ.
–ಅರಿಸ್ಟಾಟಲ್

★ ನಿಗೂಢ ನಿಸರ್ಗವೇ ರಹಸ್ಯ ದೇವರು.
–ಶ್ರೀ ಅರಬಿಂದೊ

★ ಬಾಗುವ ಹೃದಯವೇ ಅತ್ಯುತ್ತಮ, ಅದು ಯಾವತ್ತೂ ಭಗ್ನಗೊಳ್ಳುವುದಿಲ್ಲ.
–ಆಲ್ಬರ್ಟ್ ಕಾಮೂ

★ ನಿಲ್ಲದಿರುವವರೆಗೆ, ನೀವು ಎಷ್ಟು ನಿಧಾನಕ್ಕೆ ಹೋಗುತ್ತಿದ್ದೀರಿ ಎನ್ನುವುದು ಮುಖ್ಯವಲ್ಲ.
–ಕನ್‌ಫ್ಯೂಶಿಯಸ್

★ ಸೌಂದರ್ಯದ ಅತ್ಯುತ್ತಮ ಅಂಶ ಏನೆಂದರೆ, ಅದನ್ನು ಯಾವ ಛಾಯಾಚಿತ್ರವೂ ಅಭಿವ್ಯಕ್ತಿಸಲು ಆಗದಿರುವುದು.
–ಫ್ರಾನ್ಸಿಸ್ ಬಾಕನ್

★ ಜೀವನಪೂರ್ತಿ ಕೊಲ್ಲುತ್ತಾ ಹೋದರೂ ನಿಮ್ಮ ವೈರಿಗಳು ಸಂಪೂರ್ಣ ಇಲ್ಲವಾಗುವುದಿಲ್ಲ. ಆದರೆ ನಿಮ್ಮ ಕೋಪವನ್ನು ತ್ಯಜಿಸಿದರೆ ನಿಮ್ಮ ನೈಜ ವೈರಿಗಳೆಲ್ಲ ಕ್ಷಣದಲ್ಲಿ ಹತರಾಗುತ್ತಾರೆ.
–ನಾಗಾರ್ಜುನ

★ ಎಲ್ಲರಿಗೂ ಖ್ಯಾತನಾಮರಾಗಬೇಕೆಂಬ ಬಯಕೆ. ನಾವು ಏನಾದರೂ ಆಗಬೇಕೆಂದು ಬಯಸಿದ ಕ್ಷಣದಿಂದ ಸ್ವತಂತ್ರರಾಗಿರುವುದಿಲ್ಲ.
–ಜಿಡ್ಡು ಕೃಷ್ಣಮೂರ್ತಿ

★ ಇತಿಹಾಸ ಮರುಕಳಿಸುತ್ತಲೇ ಇರುತ್ತದೆ– ಮೊದಲು ದುರಂತವಾಗಿ; ಬಳಿಕ ನಕಲಿಯಾಗಿ.
–ಕಾರ್ಲ್ ಮಾರ್ಕ್ಸ್

★ ಪ್ರಕಾಶಮಾನವಾದ ನಿಮ್ಮ ಭವಿಷ್ಯದಲ್ಲಿ ಭೂತಕಾಲವನ್ನು ಮರೆಯದಿರಿ.
–ಬಾಬ್ ಮಾರ್ಲೆ

★ ಜಗತ್ತನ್ನು ಎರಡು ವಿಭಾಗಗಳಾಗಿ ವಿಂಗಡಿಸಬಹುದು– ಹಾಸ್ಯಪ್ರಜ್ಞೆ ಇದ್ದು ಧರ್ಮ ಇಲ್ಲದವರು; ಧರ್ಮ ಇದ್ದು ಹಾಸ್ಯಪ್ರಜ್ಞೆ ಇಲ್ಲದವರು,
–ಅವಿಸಿನ್ನಾ

★ ನೀವು ಕ್ರಿಯಾಶೀಲರಾಗಲು ಬಯಸುವುದಿಲ್ಲವಾದಲ್ಲಿ ಸುಮ್ಮನೆ ಇದ್ದುಬಿಡಿ; ಅದರ ಬಗ್ಗೆ ಆಲೋಚಿಸಲೂ ಹೋಗಬೇಡಿ.
–ಅನ್ನೀ ಬೆಸಂಟ್

★ ದೇಹದ ಆರೋಗ್ಯವನ್ನು ರಕ್ಷಿಸುವುದು ನಮ್ಮ ಕರ್ತವ್ಯ. ಇಲ್ಲವಾದಲ್ಲಿ ನಮ್ಮ ಮಾನಸಿಕ ಆರೋಗ್ಯವನ್ನು ರಕ್ಷಿಸಲೂ ನಮಗೆ ಆಗದು.
–ಗೌತಮ ಬುದ್ಧ

★ ಒಬ್ಬನ ಜತೆ ವರ್ಷವಿಡೀ ಮಾತನಾಡುವುದಕ್ಕಿಂತ, ಒಂದು ಗಂಟೆಯ ಕಾಲ ಆಟವಾಡಿದರೆ ಹೆಚ್ಚು ಮಾಹಿತಿಗಳು ಸಿಗುತ್ತವೆ.
–ಪ್ಲೇಟೋ